ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080–22372738, E-mail: nregs-ka@nic.in

ಸಂಖ್ಯೆ: ಗ್ರಾಅಪ:507:ಉಖಾಯೋ:2014–15 ದಿನಾಂಕ:24-11-2014

**ಪತ್ರಿಕಾ ಪ್ರಕಟಣೆ**

ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಅನುಷ್ಠಾನ ಗೊಳಸುವಲ್ಲಿ ಕಂಡು ಬರುವ ಕುಂದುಕೊರತೆಗಳನ್ನು ಸರಿಪಡಿಸಲು ಮತ್ತು ದೂರುಗಳ ವಿಲೇವಾರಿಗಾಗಿ ಈ ಕೆಳಕಂಡ ಜಿಲ್ಲೆಗಳ ಜಿಲ್ಲಾಮಟ್ಟದ ಒಂಬುಡ್ಸ್‌ಮನ್‌ರವರನ್ನು ನೇಮಿಸಲು ಅರ್ಜಿ ಆಹ್ವಾನಿಸಿದೆ.

**ಒಂಬುಡ್ಸ್‌ಮನ್ ಹುದ್ದೆ ಖಾಲಿಯಾಗಿರುವ ಹಾಗೂ ಖಾಲಿಯಾಗಲಿರುವ ಜಿಲ್ಲೆಗಳ ಹೆಸರು: ಗದಗ, ಹಾವೇರಿ, ಬಿಜಾಪುರ ಚಿಕ್ಕಮಗಳೂರು, ದಕ್ಷಿಣ ಕನ್ನಡ, ರಾಮನಗರ, ಚಿಕ್ಕಬಳ್ಳಾಪುರ ,ಬಾಗಲಕೋಟೆ ,ಬೆಳಗಾವಿ, ಶಿವಮೊಗ್ಗ & ಕೊಪ್ಪಳ**

**ಅರ್ಹತೆಗಳು:**

1. ಈ ಕೆಳಕಂಡ ಯಾವುದಾದರೊಂದು ಕ್ಷೇತ್ರದಲ್ಲಿ ಕಡೆಯ ಪಕ್ಷ 20 ವರ್ಷಗಳ ಅನುಭವ ಹೊಂದಿರ ಬೇಕಾಗಿರುತ್ತದೆ.
   ಅ) ಸಾರ್ವಜನಿಕ ಆಡಳಿತ
   ಆ) ಕಾನೂನು
   ಇ) ಶೈಕ್ಷಣಿಕ ಕ್ಷೇತ್ರ
   ಈ) ಸಮಾಜ ಸೇವೆ/ ನಿರ್ವಹಣೆ (ಮ್ಯಾನೇಜಮೆಂಟ್)
   ಸಾರ್ವಜನಿಕರೊಂದಿಗೆ/ ಸಮುದಾಯದ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿದ ಅನುಭವವು ಒಂದು ಕಡ್ಡಾಯ ಅರ್ಹತೆಯಾಗಿರುತ್ತದೆ.
2. ಅರ್ಜಿ ಸಲ್ಲಿಸುವವರು ಯಾವುದೇ ರಾಜಕೀಯ ಪಕ್ಷದ ಮತ್ತು ನಿಷೇದಿತ ಸಂಸ್ಥೆಗಳ ಸದಸ್ಯರಾಗಿರಬಾರದು.
3. ತಪಾಸಣೆ/ಭೇಟಿ/ಕ್ಷೇತ್ರ ವೀಕ್ಷಣೆ ಕೆಲಸಗಳಿಗೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಳ್ಳಲು ಶಕ್ತರಾಗಿರಬೇಕು.
4. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಟ ವಯಸ್ಸು 66 ವರ್ಷ ಮೀರಿರಬಾರದು.
5. ನೇಮಕಾತಿಯು 2 ವರ್ಷದ ಅವಧಿಯದ್ದಾಗಿರುತ್ತದೆ.
6. ಕೇಂದ್ರ/ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳ ಅನುಸಾರ ಸಂಭಾವನೆ ನೀಡಲಾಗುವುದು.

ಜಿಲ್ಲಾ ಮಟ್ಟದಲ್ಲಿ ಒಂಬುಡ್ಸ್‌ಮನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್ **www.karnregs.kar.nic.in** ನಲ್ಲಿ ನಿಗಧಿತ ನಮೂನೆಯ ಅರ್ಜಿಯನ್ನು ಅವರೋಹಣ ಮಾಡಿ, ತಮ್ಮ ವ್ಯಕ್ತಿತ್ವ ಪರಿಚಯ, ಕನಿಷ್ಠ 20 ವರ್ಷ ಕಾರ್ಯನಿರ್ವಹಿಸಿದ ಅನುಭವದ ದಾಖಲೆ ಹಾಗೂ ಅವಶ್ಯಕ ಎಲ್ಲಾ ಪೂರಕ ದಾಖಲೆಗಳೊಂದಿಗೆ ದಿನಾಂಕ:30-12-2014 ರೊಳಗೆ ತಲುಪುವಂತೆ ಖುದ್ದಾಗಿ/ಅಂಚೆ ಮೂಲಕ, ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್ ನಂ-3, 2ನೇ ಮಹಡಿ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಸಲ್ಲಿಸುವುದು.(ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರನ್ನು ಸಂಪರ್ಕಿಸಬಹುದಾಗಿದೆ, ದೂರವಾಣಿ ಸಂಖ್ಯೆ:080-22342163).

**ಟಿಪ್ಪಣಿ:** ಗದಗ,ಜಿಲ್ಲೆಗೆ ದಿನಾಂಕ: 10-02-2014 ರಂದು ಹಾವೇರಿ, ಜಿಲ್ಲೆಗೆ ದಿನಾಂಕ:21-05-2014 ರಂದು ಹಾಗೂ ಬಿಜಾಪುರ ಚಿಕ್ಕಮಗಳೂರು, ದಕ್ಷಿಣ ಕನ್ನಡ & ರಾಮನಗರ ಜಿಲ್ಲೆಗಳಿಗೆ ದಿನಾಂಕ:26-06-2014 ರಂದು ವಿಜಯ ಕರ್ನಾಟಕ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಜಿಲ್ಲೆಗಳಿಗೆ ಈಗಾಗಲೇ ಅರ್ಜಿಗಳನ್ನು ಸಲ್ಲಿಸಿದವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ಆದರೆ ಅರ್ಜಿ ನಮೂನೆಯ ಕ್ರಮ ಸಂಖ್ಯೆ 1.9 ಗೆ ಸಂಬಂಧ ಪಟ್ಟಂತೆ ನಿವೃತ್ತ ಸರ್ಕಾರಿ ಅಧಿಕಾರಿಗಳಾಗಿದ್ದಲ್ಲಿ ಶಿಸ್ತು ಕ್ರಮಕ್ಕೆ / ಇತರೆ ಇಲಾಖಾ ವಿಚಾರಣೆಗೆ ಒಳಪಟ್ಟಿರುವ ಕುರಿತು ಸಂಬಂಧ ಪಟ್ಟ ಮೇಲಾಧಿಕಾರಿಗಳಿಂದ ಧೃಡೀಕರಿಸಿದ ಪ್ರಮಾಣ ಪತ್ರವನ್ನು ಕಳುಹಿಸಲು ಕೋರಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಒಂಬುಡ್ಸ್‌ಮನ್ ನೇಮಕಾತಿಯ ಅರ್ಜಿ ನಮೂನೆ:

| 1 | ವೈಯಕ್ತಿಕ ಮಾಹಿತಿ ವಿವರ : | |
|---|---|---|
| 1.1 | ಹೆಸರು : | |
| 1.2 | ವಯಸ್ಸು : ( ದಿನಾಂಕದಂತೆ)<br>(ಜನನ ಪ್ರಮಾಣ ಪತ್ರ ಲಗತ್ತಿಸುವುದು) | |
| 1.3 | ಅಂಚೆ ವಿಳಾಸ ಅಥವಾ ಪತ್ರ ವ್ಯವಹಾರದ ವಿಳಾಸ: | |
| 1.4 | ದೂರವಾಣಿ/ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ: | |
| 1.5 | ಖಾಯಂ ವಿಳಾಸ :<br>(ವಾಸಸ್ಥಳದ ರುಜುವಾತು ದಾಖಲಾತಿಯನ್ನು ಲಗತ್ತಿಸುವುದು) | |
| 1.6 | ನೀವು ವೈದ್ಯಕೀಯವಾಗಿ (ದೈಹಿಕವಾಗಿ & ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ಧೃಢಕಾಯರಾಗಿರುವಿರಾ?<br>(ಧೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು) | |
| 1.7 | ರಾಜಕೀಯ ಪಕ್ಷದ ಸದಸ್ಯರೇ ?<br>(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಪ್ರಮಾಣ ಪತ್ರವನ್ನು ಲಗತ್ತಿಸುವುದು.) | |
| 1.8 | ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ ?<br>(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಲಗತ್ತಿಸುವುದು) | |
| 1.9 | ಶಿಸ್ತು ಕ್ರಮಕ್ಕೆ ಒಳಪಟ್ಟಿರುವಿರಾ / ಇತರೆ ಇಲಾಖಾ ವಿಚಾರಣೆಗೆ ಒಳಪಟ್ಟಿರುವಿರಾ?<br>(ಸಂಬಂಧ ಪಟ್ಟ ಮೇಲಾಧಿಕಾರಿಗಳಿಂದ ಧೃಢೀಕರಿಸಿದ ಪ್ರಮಾಣ ಪತ್ರವನ್ನು ಲಗತ್ತಿಸುವುದು) | |
| 1.10 | ಯಾವುದೇ ಸಾಮರ್ಥ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ ಹೊಂದಿರುವಿರಾ? | |
| 2 | ವೃತ್ತಿ ಪರ ಮಾಹಿತಿ ವಿವರ : | |
| 2.1 | ಉನ್ನತ ವಿದ್ಯಾರ್ಹತೆ :<br>ಗೆಜಿಟೆಡ್ ಅಧಿಕಾರಿಗಳಿಂದ ಧೃಢೀಕರಿಸಿದ ಅಧಿಕೃತ ಪ್ರಮಾಣ ಪತ್ರವನ್ನು ಲಗತ್ತಿಸುವುದು.<br>(ಕನಿಷ್ಠ ವಿದ್ಯಾರ್ಹತೆ: ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿರತಕ್ಕದ್ದು) | |
| 2.2 | ಎಷ್ಟು ವರ್ಷಗಳ ಕೆಲಸದ ಅನುಭವವಿದೆ :<br>(ಗೆಜಿಟೆಡ್ ಅಧಿಕಾರಿಗಳಿಂದ ಧೃಢೀಕರಿಸಿದ ಅಧಿಕೃತ ಪ್ರಮಾಣ ಪತ್ರವನ್ನು ಲಗತ್ತಿಸುವುದು). | |
| 2.3 | ಕ್ಷೇತ್ರ ಮಟ್ಟದ ಅನುಭವ: ಈ ಕೆಳಕಂಡ ಯಾವುದಾದರು ಒಂದು ಕ್ಷೇತ್ರದಲ್ಲಿ ಕನಿಷ್ಠ 20 ವರ್ಷ ಕಾರ್ಯನಿರ್ವಹಿಸಿರುವ ಅನುಭವ ಇರತಕ್ಕದ್ದು. ಈ ಕುರಿತು ವಿವರವಾದ ಟಿಪ್ಪಣಿ ಹಾಗೂ ಕಾರ್ಯನಿರ್ವಹಿಸಿದ ಅನುಭವಕ್ಕೆ ಸಂಬಂಧಿಸಿದ ಧೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. | |
| | (ಅ) ಸಾರ್ವಜನಿಕ ಆಡಳಿತ | |
| | (ಆ) ಕಾನೂನು | |
| | (ಇ) ಶೈಕ್ಷಣಿಕ ಸೇವೆ | |
| | (ಈ) ಸಮಾಜ ಸೇವೆ/ ನಿರ್ವಹಣೆ (ಮ್ಯಾನೇಜ್‌ಮೆಂಟ್) | |
| 2.4 | ಈ ಹಿಂದೆ ಹೊಂದಿದ ಗರಿಷ್ಠ ಹುದ್ದೆ/ಸ್ಥಾನ : | |
| 2.5 | ಯಾವುದಾದರೂ ಸೊಸೈಟಿ/ವೃತ್ತಿ ಕಾಯ ಸಂಸ್ಥೆಯ ಸದಸ್ಯರಾಗಿದ್ದಲ್ಲಿ ವಿವರಣೆಗಳನ್ನು ನೀಡುವುದು : | |
| 2.6 | ನೇಮಕಾತಿ ಬಯಸುವ ಜಿಲ್ಲೆ: ಆದ್ಯತೆ ಮೇರೆಗೆ | 1) 2) 3) 4) ------------ |
| 3 | ಸ್ವಯಂ ಘೋಷಣೆ: | |

ಅಧಿನಿಯಮದ ಮಿತಿಯೊಳಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಕಾರ್ಯಚರಣೆಯ ಮಾರ್ಗಸೂಚಿಗಳನ್ವಯ ರೂಪಿಸಿದ್ದು, ಅದರ ಎಲ್ಲಾ ಪ್ರಕಾರ್ಯಗಳನ್ನು ಮತ್ತು ಒಂಬುಡ್ಸಮನ್ ಕುರಿತು ಜಾಹಿರಾತು ಮೂಲಕ ನೀಡಿರುವ ಸೂಚನೆಗಳನ್ನು ಮತ್ತು ಒಂಬುಡ್ಸಮನ್ ಹುದ್ದೆಯು ಅರೆಕಾಲಿಕ ಹುದ್ದೆಯಾಗಿರುವುದನ್ನು ಪೂರ್ಣವಾಗಿ ಅರ್ಥೈಸಿಕೊಂಡಿರುವುದನ್ನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ:

ಸ್ಥಳ: ಅರ್ಜಿದಾರರ ಸಹಿ ಅರ್ಜಿದಾರರ ಹೆಸರು: